**ದಿನಾಂಕಃ 24.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 1 ರಿಂದ 3, 5 ರಿಂದ 7ನೇ ಪ್ರತಿವಾದಿಗಳ ಪರ ಶ್ರೀ. ಹೆಚ್.ಕೆ. ವಕೀಲರಿಂದಃ**

1) ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಕನ್ನಡ ಭಾಷೆಯಲ್ಲಿ ತಯಾರಿಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನಾನು ಉಳಿದ ಎಲ್ಲಾ ವಾದಿಗಳ ಪರವಾಗಿಯೂ ಸಾಕ್ಷ್ಯ ನುಡಿಯುತ್ತಿದ್ದೇನೆ. ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ಹೇಳಿ ಈ ದಾವೆಯನ್ನು ಹೂಡಿರುತ್ತೇವೆ.

2) ನನ್ನ ತಂದೆ ವೀರಯ್ಯ. ಆತನಿಗೆ ಎಂಟು ಜನ ಮಕ್ಕಳು. ನನ್ನ ಸಹೋದರಿಯರನ್ನೂ ಸಹ ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ. ನನ್ನ ಸಹೋದರಿಯರು ಎಂದರೆ ಮಹದೇವಮ್ಮ, ಮುದ್ದಮ್ಮ, ಗೌರಮ್ಮ ಮತ್ತು ಜಯಲಕ್ಷ್ಮಮ್ಮ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಸರ್ವೆ ನಂ.26 ರಲ್ಲಿ 11 1/2 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನ್ನ ತಂದೆ ಸರ್ವೆ ನಂ.30/4 ರಲ್ಲಿ 11 1/2 ಗುಂಟೆ ಜಮೀನು ಖರೀದಿ ಮಾಡಿದ್ದಾಗಿ ನುಡಿಯುತ್ತಾರೆ. ನನ್ನ ತಂದೆ 1977 ರಲ್ಲಿ ಜಮೀನನ್ನು ಖರೀದಿ ಮಾಡಿದರು. ಆ ರೀತಿ ಖರೀದಿ ಮಾಡಿದ ನಂತರ ನನ್ನ ತಂದೆಯ ಹೆಸರಿಗೆ ಎಂ.ಆರ್ ನಂ.2/1977-78 ರಲ್ಲಿ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ನಿಮ್ಮ ತಂದೆ ಸರ್ವೆ ನಂ.26 ರಲ್ಲಿ 11 1/2 ಗುಂಟೆ ಜಮೀನನ್ನು ಖರೀದಿ ಮಾಡಿದ ಸಂಬಂಧ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಎಂ.ಆರ್ ನಂ.2/1977-78 ರ ಖಾತೆ ಮೇರೆಗೆ ನಿಮ್ಮ ತಂದೆ ಪಿ.ಎಲ್.ಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜಮೀನನ್ನು ಖರೀದಿ ಮಾಡಿದ ಕಾಲಕ್ಕೆ ನಾನು ಅಪ್ರಾಪ್ತ ವಯಸ್ಕನಾಗಿದ್ದೆ.

3) ನನ್ನ ತಂದೆ ಮತ್ತು ಪ್ರತಿವಾದಿಗಳ ತಂದೆಯ ಬೋರಯ್ಯನ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ನೆನಪಿಲ್ಲ. ನನ್ನ ತಂದೆಗೆ ವ್ಯವಹಾರ ಜ್ಞಾನ

ಚೆನ್ನಾಗಿ ಇತ್ತು ಎಂದರೆ ಸರಿ. ನನ್ನ ತಂದೆ ಜಮೀನನ್ನು ಖರೀದಿ ಮಾಡಿದ ನಂತರ ಒಂದು ವೇಳೆ ಜಮೀನಿನ ಸರ್ವೆ ನಂಬರ್ ತಪ್ಪಾಗಿದ್ದಲ್ಲಿ ಆತ ಈ ಮೊದಲೇ ಸರಿ ಪಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 30/4 ರ ಪಹಣಿ ಪತ್ರಿಕೆಯಲ್ಲಿ ಕೆಂಪರಾಜು ರವರ ಹೆಸರಿನಲ್ಲಿ 11 ಗುಂಟೆ ಜಮೀನು ಮಾತ್ರ ಇದೆ ಎಂದರೆ ಸರಿಯಲ್ಲ.

4) ಸರ್ವೆ ನಂ. 30/4 ರ ಜಮೀನಿನ ಪೂರ್ವ ದಿಕ್ಕಿಗೆ ದೊಡ್ಡತಾಯಮ್ಮ ರವರಿಗೆ ಸೇರಿದ ಮನೆ, ಪಶ್ಚಿಮಕ್ಕೆ ಮಹದೇವಯ್ಯ ಬಿನ್ ಪುಟ್ಟಮಾದಯ್ಯ ರವರಿಗೆ ಸೇರಿದ ಜಮೀನು, ಉತ್ತರಕ್ಕೆ ಚೌಡಮ್ಮ ಕೋಂ ತಮ್ಮಯ್ಯ ರವರಿಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರದ ವತಿಯಿಂದ ಮಾಡಿರುವ ನಿವೇಶನಗಳು ಇವೆ ಎಂದರೆ ಸರಿ. ನಿಪಿ.3 ರ ಕ್ರಯ ಪತ್ರದಲ್ಲಿನ ಚಕ್ಕುಬಂದಿ ಮತ್ತು ಈಗ ಹೇಳಿದ ಸರ್ವೆ ನಂ.30/4 ರ ಚಕ್ಕುಬಂಧಿಗಳು ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿ. ಸರ್ವೆ ನಂ.30/4 ರಲ್ಲಿ ಮತ್ತು ಸರ್ವೆ ನಂ.26 ರಲ್ಲಿನ ವಿಸ್ತೀರ್ಣಗಳು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಿಪಿ.3 ರ ಕ್ರಯ ಪತ್ರದಲ್ಲಿ ಯಾವುದೇ ರೀತಿಯ ತಪ್ಪು ಸರ್ವೆ ನಂಬರ್ ಅನ್ನು ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಸರ್ವೆ ನಂಬರ್ ತಪ್ಪಿನಿಂದ ಕೂಡಿದೆ ಎಂದು ನನಗೆ 20 ವರ್ಷಗಳ ಹಿಂದೆ ತಿಳಿದುಬಂದಿತ್ತು.

5) ಸರ್ವೆ ನಂ.30/4 ರ ಜಮೀನು ನಮ್ಮ ಗ್ರಾಮದ ಪಕ್ಕದಲ್ಲಿಯೇ ಇದೆ ಎಂದರೆ ಸರಿ. ಆ ಜಾಗ ಹೆಚ್ಚಿನ ಬೆಲೆ ಬಾಳುತ್ತದೆ ಎಂದರೆ ಸರಿ. ಸರ್ವೆ ನಂ.26 ರಲ್ಲಿನ ಜಮೀನು ನಮ್ಮ ಗ್ರಾಮದಿಂದ ದೂರ ಇದೆ ಎಂದರೆ ಸರಿ. ಸರ್ವೆ ನಂ.30/4 ರ ಜಮೀನು ಈಗ ಹೆಚ್ಚಿನ ಬೆಲೆ ಬಾಳುವ ಸಲುವಾಗಿ ಅದನ್ನು ಪ್ರತಿವಾದಿಗಳಿಂದ ಕಬಳಿಸುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ.13 ಮತ್ತು 14 ರ ಭಾವಚಿತ್ರಗಳಲ್ಲಿ ಕಾಣುವ ಎಲೆಕ್ಟ್ರಿಕ್ ಟಿ.ಸಿ ನಮ್ಮ ಜಮೀನಿನಲ್ಲಿ ಇರುತ್ತದೆ. ಸದರಿ ಎಲೆಕ್ಟ್ರಿಕ್ ಟಿ.ಸಿ ನಮ್ಮ ಜಮೀನಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಎಲೆಕ್ಟ್ರಿಕ್ ಟಿ.ಸಿ ನನ್ನ ಮಾವನ ಮಗ ಮಹದೇವಯ್ಯನ ಜಮೀನಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**